# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:31/07/2008 ರ ನಡವಳಿಗಳು

**ವಿಷಯದ ಸಂಖ್ಯೆ:381/2008-09**

ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರಲ್ಲಿ ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಅನುಷ್ಠಾನಗೊಳಿಸಲು ತೆಗೆದು ಕೊಂಡಿರುವ ತೀರ್ಮಾನವನ್ನು ರದ್ದುಗೊಳಿಸುವ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಕೆಗಳು ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರಲ್ಲಿ ಪಾಲಿಕೆ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ (ಹಾಲಿ ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ) ಸಹಯೋಗದೊಂದಿಗೆ ಸಣ್ಣ ಉದ್ಯೋಗ ಪ್ರಾರಂಭಿಸಲು ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಎಲ್ಲಾ 100 ವಾರ್ಡ್‌ಗಳಿಗೂ ವಿಸ್ತರಿಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಗಿರುತ್ತದೆ. ಈ ಯೋಜನೆ ಅಡಿಯಲ್ಲಿ ನಿಗಮದಿಂದ ಸಾಲ ಮಂಜೂರಾದ ಪ್ರತಿ ಫಲಾನುಭವಿಗೆ ರೂ.10,000/- (ರೂ.ಹತ್ತು ಸಾವಿರಗಳು ಮಾತ್ರ) ಸಹಾಯಧನವನ್ನು ಪಾಲಿಕೆಯಿಂದ ಬಿಡುಗಡೆ ಮಾಡಬೇಕಾಗಿರುತ್ತದೆ.

2006-07ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಈ ಮೇಲ್ಕಂಡ ಯೋಜನೆಗೆ ಯಾವುದೇ ಅನುದಾನವನ್ನು ಕಾಯ್ದಿರಿಸದೇ ಇದ್ದುದರಿಂದ, ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆಯ ಯೋಜನೆಯ ಶೀರ್ಷಿಕೆ ಅಡಿಯಲ್ಲಿ ಭರಿಸಲು ತೀರ್ಮಾನವಾಗಿರುತ್ತದೆ. ಆದರೆ, ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ ಅಡಿಯಲ್ಲಿ ಶೇ.18 ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ 2004-05ನೇ ಸಾಲಿನ ಆಟೋರಿಕ್ಷಾ ಸಾಲದ ಯೋಜನೆ, 2005-06ನೇ ಸಾಲಿನ ಮಾರುತಿ ವ್ಯಾನ್ ಟ್ಯಾಕ್ಸಿಗಳ ಸಾಲದ ಯೋಜನೆ ಹಾಗೂ 2006-07 ನೇ ಸಾಲಿನಲ್ಲಿ ಮಾರುತಿ ವ್ಯಾನ್/ಟಾಟಾ ಇಂಡಿಕಾ ಟ್ಯಾಕ್ಸಿಗಳ ಸಾಲದ ಯೋಜನೆಯನ್ನು ಹಮ್ಮಿಕೊಂಡಿದ್ದು, ಸದರಿ ಯೋಜನೆಗಳಿಗೆ ಅನುದಾನವನ್ನು ಖರ್ಚು ಮಾಡಲಾಗುತ್ತಿತ್ತು.

ಮೈಕ್ರೋ ಕ್ರೆಡಿಟ್ ಸಾಲದ ಯೋಜನೆ ಅಡಿಯಲ್ಲಿ ಸಹಾಯಧನವನ್ನು ನೀಡುವ ಯೋಜನೆಯನ್ನು 2006-07ನೇ ಸಾಲಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಹಾಗೂ ಅನುದಾನವನ್ನು ಆಯವ್ಯಯದಲ್ಲಿ ಕಾಯ್ದಿರಿಸದೆ ಇದ್ದುದರಿಂದ ಈ ಯೋಜನೆಯನ್ನು ಸದರಿ ಸಾಲಿನಲ್ಲಿ ಹಮ್ಮಿಕೊಳ್ಳಲು ಕಷ್ಟಕರವಾದ ಕಾರಣ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರ ನಿರ್ಣಯವನ್ನು ಕೆ.ಎಂ.ಸಿ ಕಾಯ್ದೆ ಕಾಲಂ 72ರ ಅನ್ವಯ ರದ್ದುಪಡಿಸಲು ದಿನಾಂಕ:31/10/2006 ರ ಆಯುಕ್ತರ ಪತ್ರದಲ್ಲಿ ಕೋರಲಾಗಿತ್ತು.

2007-08ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಆಯವ್ಯಯದಲ್ಲಿ ಈ ಮೇಲ್ಕಂಡ ಯೋಜನೆಗೆ ಅನುದಾನವನ್ನು ಕಾಯ್ದಿರಿಸಿ ಅದನ್ನು ಅನುಷ್ಠಾನ ಮಾಡಲಾಗಿದೆ. ಅದರಂತೆ 2008-09ನೇ ಸಾಲಿನಲ್ಲಿಯೂ ಸಹ ಈ ಯೋಜನೆಯನ್ನು ಮುಂದುವರೆಸಿ ಅನುಷ್ಠಾನ ಮಾಡಲಾಗುತ್ತಿದೆ.

ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರು ತಮ್ಮ ಪತ್ರದ ಸಂಖ್ಯೆ: ನಅಇ 327 ಎಂಎನ್‌ಯು 2006 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:40(186) ಅನ್ನು ರದ್ದು ಪಡಿಸಬೇಕೆ? ಅಥವಾ ಇದನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:31/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:381/2008–09**

ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರಲ್ಲಿ ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಅನುಷ್ಠಾನಗೊಳಿಸಲು ತೆಗೆದು ಕೊಂಡಿರುವ ತೀರ್ಮಾನವನ್ನು ರದ್ದುಗೊಳಿಸುವ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಕೆಗಳು ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರಲ್ಲಿ ಪಾಲಿಕೆ ಹಾಗೂ ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ (ಹಾಲಿ ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ) ಸಹಯೋಗದೊಂದಿಗೆ ಸಣ್ಣ ಉದ್ಯೋಗ ಪ್ರಾರಂಭಿಸಲು ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಎಲ್ಲಾ 100 ವಾರ್ಡ್‌ಗಳಿಗೂ ವಿಸ್ತರಿಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಗಿರುತ್ತದೆ. ಈ ಯೋಜನೆ ಅಡಿಯಲ್ಲಿ ನಿಗಮದಿಂದ ಸಾಲ ಮಂಜೂರಾದ ಪ್ರತಿ ಫಲಾನುಭವಿಗೆ ರೂ.10,000/– (ರೂ.ಹತ್ತು ಸಾವಿರಗಳು ಮಾತ್ರ) ಸಹಾಯಧನವನ್ನು ಪಾಲಿಕೆಯಿಂದ ಬಿಡುಗಡೆ ಮಾಡಬೇಕಾಗಿರುತ್ತದೆ.

2006–07ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಈ ಮೇಲ್ಕಂಡ ಯೋಜನೆಗೆ ಯಾವುದೇ ಅನುದಾನವನ್ನು ಕಾಯ್ದಿರಿಸದೇ ಇದ್ದುದರಿಂದ, ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆಯ ಯೋಜನೆಯ ಶೀರ್ಷಿಕೆ ಅಡಿಯಲ್ಲಿ ಭರಿಸಲು ತೀರ್ಮಾನವಾಗಿರುತ್ತದೆ. ಆದರೆ, ನಿರುದ್ಯೋಗಿಗಳಿಗೆ ಪಾಲಿಕೆಯ ಆರ್ಥಿಕ ಸ್ವಾವಲಂಬನೆ ಯೋಜನೆ ಅಡಿಯಲ್ಲಿ ಶೇ.18 ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ನಿರುದ್ಯೋಗಿಗಳಿಗೆ 2004–05ನೇ ಸಾಲಿನ ಆಟೋರಿಕ್ಷಾ ಸಾಲದ ಯೋಜನೆ, 2005–06ನೇ ಸಾಲಿನ ಮಾರುತಿ ವ್ಯಾನ್ ಟ್ಯಾಕ್ಸಿಗಳ ಸಾಲದ ಯೋಜನೆ ಹಾಗೂ 2006–07 ನೇ ಸಾಲಿನಲ್ಲಿ ಮಾರುತಿ ವ್ಯಾನ್/ಟಾಟಾ ಇಂಡಿಕಾ ಟ್ಯಾಕ್ಸಿಗಳ ಸಾಲದ ಯೋಜನೆಯನ್ನು ಹಮ್ಮಿಕೊಂಡಿದ್ದು, ಸದರಿ ಯೋಜನೆಗಳಿಗೆ ಅನುದಾನವನ್ನು ಖರ್ಚು ಮಾಡಲಾಗುತ್ತಿತ್ತು.

ಮೈಕ್ರೋ ಕ್ರೆಡಿಟ್ ಸಾಲದ ಯೋಜನೆ ಅಡಿಯಲ್ಲಿ ಸಹಾಯಧನವನ್ನು ನೀಡುವ ಯೋಜನೆಯನ್ನು 2006–07ನೇ ಸಾಲಿನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳದೆ ಹಾಗೂ ಅನುದಾನವನ್ನು ಆಯವ್ಯಯದಲ್ಲಿ ಕಾಯ್ದಿರಿಸದೆ ಇದ್ದುದರಿಂದ ಈ ಯೋಜನೆಯನ್ನು ಸದರಿ ಸಾಲಿನಲ್ಲಿ ಹಮ್ಮಿಕೊಳ್ಳಲು ಕಷ್ಟಕರವಾದ ಕಾರಣ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:40(186) ದಿನಾಂಕ:27/09/2006 ರ ನಿರ್ಣಯವನ್ನು ಕೆ.ಎಂ.ಸಿ ಕಾಯ್ದೆ ಕಾಲಂ 72ರ ಅನ್ವಯ ರದ್ದುಪಡಿಸಲು ದಿನಾಂಕ:31/10/2006 ರ ಆಯುಕ್ತರ ಪತ್ರದಲ್ಲಿ ಕೋರಲಾಗಿತ್ತು.

2007–08ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಆಯವ್ಯಯದಲ್ಲಿ ಈ ಮೇಲ್ಕಂಡ ಯೋಜನೆಗೆ ಅನುದಾನವನ್ನು ಕಾಯ್ದಿರಿಸಿ ಅದನ್ನು ಅನುಷ್ಠಾನ ಮಾಡಲಾಗಿದೆ. ಅದರಂತೆ 2008–09ನೇ ಸಾಲಿನಲ್ಲಿಯೂ ಸಹ ಈ ಯೋಜನೆಯನ್ನು ಮುಂದುವರೆಸಿ ಅನುಷ್ಠಾನ ಮಾಡಲಾಗುತ್ತಿದೆ.

ಈಗ ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆರವರು ತಮ್ಮ ಪತ್ರದ ಸಂಖ್ಯೆ: ನಅಇ 327 ಎಂಎನ್‌ಯು 2006 ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ:40(186) ಅನ್ನು ರದ್ದು ಪಡಿಸಬೇಕೆ? ಅಥವಾ ಇದನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ಅವಶ್ಯಕತೆ ಇದೆಯೇ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, 2006–07ನೇ ಸಾಲಿನಲ್ಲಿ ಅನುಷ್ಠಾನ ಮಾಡದ ಕಾರಣ, ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಿರ್ಣಯವನ್ನು ಕೆ.ಎಂ.ಸಿ. ಕಾಯ್ದೆಯ ಕಾಲಂ 72 ರ ಅನ್ವಯ ರದ್ದುಪಡಿಸಲು ಆಕ್ಷೇಪಣೆ ಇಲ್ಲವೆಂದು ಸರ್ಕಾರಕ್ಕೆ ತಿಳಿಸಬಹುದಾಗಿದೆ. ಮುಂದುವರೆದಂತೆ ಸದರಿ ಕಾರ್ಯಕ್ರಮವನ್ನು 2007–08ನೇ ಸಾಲಿನಿಂದ ಆಯವ್ಯಯದಲ್ಲಿ ಅಳವಡಿಸಿಕೊಂಡು ಸರ್ಕಾರದ ಅನುಮೋದನೆಯೊಂದಿಗೆ ಈಗಾಗಲೇ ಜಾರಿಯಲ್ಲಿರುವುದು ಸಹ ಸರ್ಕಾರದ ಗಮನಕ್ಕೆ ತರಬಹುದಾಗಿದೆ. 2007–08ನೇ ಸಾಲಿನಿಂದ ಮೈಕ್ರೋ ಕ್ರೆಡಿಟ್ ಯೋಜನೆಯನ್ನು ಅನುಷ್ಠಾನಗೊಳಿಸಿರುವುದನ್ನು ಸರ್ಕಾರದ ಅನುಮೋದನೆಯನ್ನು ನೀಡುವಂತೆ ಅಭಿಪ್ರಾಯಿಸಿ ಸರ್ಕಾರಕ್ಕೆ ಪತ್ರ ಬರೆಯಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:27/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:27/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:31/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:382/2008–09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಬ್ಯಾಟರಾಯನಪುರ ವಲಯದ ಯಲಹಂಕ – ಯಶವಂತಪುರ ರಸ್ತೆಯನ್ನು ದೊಡ್ಡಬಳ್ಳಾಪುರ ರಸ್ತೆಯಿಂದ ಗಂಗಮ್ಮ ವೃತ್ತದ ವರೆಗೆ ಅಗಲಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬ್ಯಾಟರಾಯನಪುರ ವಲಯದ ಯಲಹಂಕ – ಯಶವಂತಪುರ ಪ್ರದೇಶಕ್ಕೆ ಸಂಪರ್ಕಿಸುವ ಮುಖ್ಯ ರಸ್ತೆ ಇದ್ದು, ಸದರಿ ರಸ್ತೆಯು ಬೆಂಗಳೂರು ನಗರದ ಪಶ್ಚಿಮ ಭಾಗವನ್ನು, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ಸಂಪರ್ಕಿಸುತ್ತದೆ. ಈ ರಸ್ತೆಯನ್ನು ಆಭಿವೃದ್ಧಿಪಡಿಸಿದ್ದಲ್ಲಿ ಹಾಲೀ ಈಗ ಬಳ್ಳಾರಿ ರಸ್ತೆಯಲ್ಲಿ ಆಗುತ್ತಿರುವ ವಾಹನ ದಟ್ಟಣೆಯು ಕಡಿಮೆಯಾಗಿ ಸಾಕಷ್ಟು ಸಮಯವನ್ನು ಮತ್ತು ದೂರವನ್ನು ಕಡಿಮೆ ಮಾಡಿದಂತಾಗುತ್ತದೆ.

ಈ ನಿಟ್ಟಿನಲ್ಲಿ ಸದರಿ ರಸ್ತೆಯನ್ನು ದೊಡ್ಡಬಳ್ಳಾಪುರ ರಸ್ತೆಯಿಂದ ಗಂಗಮ್ಮ ವೃತ್ತದವರೆಗೆ ಅಭಿವೃದ್ಧಿ ಮಾಡಬೇಕೆಂದು ಉದ್ದೇಶಿಸಲಾಗಿರುತ್ತದೆ. ಸದರಿ ರಸ್ತೆಯನ್ನು ಅಗಲಗೊಳಿಸಿ ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ರಸ್ತೆ ಅಭಿವೃದ್ಧಿ ಪಡಿಸಲು ಯೋಜಿಸಲಾಗಿರುತ್ತದೆ. ಈಗ ಸದರಿ ರಸ್ತೆಯಲ್ಲಿ ತ್ವರಿತ ಗತಿಯಲ್ಲಿ ಅಭಿವೃದ್ಧಿಪಡಿಸಲು ಮೂರು ಸ್ಥಳಗಳನ್ನು ಮೊದಲ ಹಂತದಲ್ಲಿ ಗುರುತಿಸಲಾಗಿರುತ್ತದೆ. ಸದರಿ ಮೂರು ಕಾಮಗಾರಿಗಳ ವಿವರ ಕೆಳಕಂಡಂತೆ ಇರುತ್ತದೆ;

| ಕ್ರ. ಸಂ. | ವಲಯ | ಕಾಮಗಾರಿಯ ಹೆಸರು | ಅಂದಾಜು ವೆಚ್ಚ ಲಕ್ಷ. ರೂ ಗಳಲ್ಲಿ | ಕಾಮಗಾರಿ ಸಂಕೇತ |
|---|---|---|---|---|
| 1 | ಬ್ಯಾಟರಾಯನಪುರ | ದೊಡ್ಡಬಳ್ಳಾಪುರ ರಸ್ತೆಯಿಂದ ಗಂಗಮ್ಮ ವೃತ್ತದವರೆಗಿನ ವ್ಯಾಪ್ತಿಯಲ್ಲಿ ಚೈನೇಜ್ 3340.00ಮೀ ನಿಂದ 3710.00ಮೀ (ಚಿಕ್ಕಬೆಟ್ಟಹಳ್ಳಿ) ವರೆಗಿನ ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿ. | 99.80 | 202–09–N-P-E-R-001 |
| 2 | ಬ್ಯಾಟರಾಯನಪುರ | ದೊಡ್ಡಬಳ್ಳಾಪುರ ರಸ್ತೆಯಿಂದ ಗಂಗಮ್ಮ ವೃತ್ತದವರೆಗಿನ ವ್ಯಾಪ್ತಿಯಲ್ಲಿ ಚೈನೇಜ್4260.00ಮೀ ನಿಂದ 4640.00ಮೀ (ವಿದ್ಯಾರಣ್ಯಪುರ ಕ್ರಾಸ್) ವರೆಗಿನ ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿ. | 99.60 | 202–09–N-P-E-R-002 |
| 3 | ಬ್ಯಾಟರಾಯನಪುರ | ದೊಡ್ಡಬಳ್ಳಾಪುರ ರಸ್ತೆಯಿಂದ ಗಂಗಮ್ಮ ವೃತ್ತದವರೆಗಿನ ವ್ಯಾಪ್ತಿಯಲ್ಲಿ ಚೈನೇಜ್ 5020.00ಮೀ ನಿಂದ 5320.00ಮೀ (ಎಂ.ಎಸ್.ಪಾಳ್ಯ) ವರೆಗಿನ ರಸ್ತೆಯನ್ನು ಅಗಲಗೊಳಿಸಿ ಅಭಿವೃದ್ಧಿಪಡಿಸುವ ಕಾಮಗಾರಿ. | 98.00 | 202–09–N-P-E-R-003 |

. . . 2

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮೇಲ್ಕಂಡ ಕಾಮಗಾರಿಗಳು ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆ ಜೆ.ಎನ್.ಎನ್.ಅರ್.ಯು.ಎಂ. ಶೀರ್ಷಿಕೆಯಲ್ಲಿ ತೆಗೆದುಕೊಳ್ಳಲಾಗಿದ್ದು, ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಲೋಕೋಪಯೋಗಿ/ರಾಷ್ಟ್ರೀಯ ಹೆದ್ದಾರಿ ಇಲಾಖೆಯ ದರಪಟ್ಟಿ 2007-08ರಂತೆ ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಗಳು ತುರ್ತಿನದ್ದಾಗಿರುವುದರಿಂದ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ ಹೊರಡಿಸಲಾಗಿರುತ್ತದೆ.

ಈ ಮೇಲ್ಕಂಡ ರಸ್ತೆಯ ಭಾಗಗಳನ್ನು ಪ್ರಮುಖ ರಾಷ್ಟ್ರೀಯ ಹೆದ್ದಾರಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಅಗತ್ಯ ಐಟಂಗಳನ್ನು ಅಳವಡಿಸಿಕೊಂಡು ಐ.ಅರ್.ಸಿ. ಅನ್ವಯ ನಿರ್ಧಿಷ್ಟವಾದ ರಸ್ತೆ ಅಗಲ (Carriage Width) ರಸ್ತೆ ಇಕ್ಕೆಲಗಳಲ್ಲಿ ಅರ್.ಸಿ.ಸಿ. ಚರಂಡಿ, ರಸ್ತೆ ವಿಭಜಕ ಮತ್ತು ರಸ್ತೆಯನ್ನು ಮುಂದೆ ಅಗೆಯಲು ಅವಕಾಶ ನೀಡದಂತೆ Utility ducts ಇವೇ ಮುಂತಾದ ಅಂಶಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸಿಕೊಂಡು ಉತ್ತಮ ದರ್ಜೆಯ ರಸ್ತೆಯಾಗಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.

ಸರ್ಕಾರದ ಅದೇಶ ಸಂಖ್ಯೆ:ಯು.ಡಿ.ಡಿ/116/ಎ.ಹೆಚ್.ಡಿ/2002, ದಿನಾಂಕ:24-01-2003ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳ 1977ರ ನಿಯಮ 6ಕ್ಕೆ ಅರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಆಡಳಿತಾತ್ಮಕ ಮಂಜೂರಾತಿ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ಅತೀ ತುರ್ತಾಗಿ ನಿರ್ವಹಿಸಬೇಕಾದ್ದರಿಂದ ಅಲ್ಪಾವಧಿ ಟೆಂಡರ್ ಕರೆಯಲು ಹಾಗೂ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:24-07-2008ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:24-07-2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

ವಿಷಯದ ಸಂಖ್ಯೆ:47/2008–09

2008–09ನೇ ಸಾಲಿನ ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ ಆಚರಿಸುವ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ, ದಿನಾಂಕ:14/04/2008 ರಂದು ಪ್ರತಿ ವರ್ಷದಂತೆ ಈ ವರ್ಷವೂ ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆಯನ್ನು ಸಡಗರದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ತಿರ್ಮಾನಿಸಲಾಗಿದೆ. ಈ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಹಮ್ಮಿಕೊಂಡು ಆಚರಿಸಲು ಎಲ್ಲಾ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಬೇಕಾಗಿದೆ. ಈ ಸಂಬಂಧ, ಆಹ್ವಾನ ಪತ್ರಿಕೆಗಳ ವಿತರಣೆ, ಆಹ್ವಾನಿತರಿಗೆ ಬ್ಯಾಡ್ಜ್ ವಿತರಣೆ, ಗಣ್ಯರನ್ನು ಸನ್ಮಾನಿಸಲು ಹಾರ, ಶಾಲು, ನಿರೂಪಣೆ ಹಾಗೂ ಪ್ರಾರ್ಥನೆ ಮಾಡುವವರಿಗೆ ಸಂಭಾವನೆ, ಬಹುವರ್ಣದ ಫ್ಲೆಕ್ಸ್ ಬ್ಯಾನರ್, ಕರ ಪತ್ರಗಳು, ಫ್ಲೆಕ್ಸ್ ಕಟ್‌ಔಟ್, ಉತ್ತಮ ಹಾಗೂ ನಿವೃತ್ತ ಪೌರಕಾರ್ಮಿಕರುಗಳಿಗೆ ಸನ್ಮಾನ, ವಿವಿಧ ಸಂಘ ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮದ ಆಯೋಜನೆ, ಎಲ್ಲಾ ಪೌರ ಕಾರ್ಮಿಕರಿಗೆ, ಗ್ಯಾಂಗ್‌ಮನ್‌ಗಳಿಗೆ, ಮಾಲಿಗಳಿಗೆ, ದಫೇದಾರ್‌ಗಳಿಗೆ ಕಾರ್ಮಿಕರ ದಿನಾಚರಣೆ ಅಂಗವಾಗಿ ಸುವರ್ಣ ಕರ್ನಾಟಕದ ಕೊಡುಗೆ ಪ್ರೋತ್ಸಾಹಧನ ನೀಡಲು, ಕ್ರೀಡೆ ನಡೆಸಲು, ತೀರ್ಪುಗಾರರಾಗಿ ಭಾಗವಹಿಸುವ ದೈಹಿಕ ಶಿಕ್ಷಕರಿಗೆ ಸಂಭಾವನೆ, ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಉತ್ತಮ ಹಾಗೂ ನಿವೃತ್ತ ನೌಕರರಿಗೆ ಮೊಮೆಂಟೋಗಳನ್ನು ವಿತರಿಸಲು, ಉಪಹಾರ ಹಾಗೂ ಸಿಹಿ ಹಂಚಿಕೆ ಹಾಗೂ ಇತರೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ ಸಮಪರ್ಕಕವಾಗಿ ಆಚರಿಸಲು ತಗಲಬಹುದಾದ ಖರ್ಚು ವೆಚ್ಚದ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿದ್ದು, ಈ ವಿವರಗಳು ಕೆಳಕಂಡಂತಿವೆ

| ಕ್ರ.ಸಂ | ಖರ್ಚು ವೆಚ್ಚದ ವಿವರಗಳು | ಮೊತ್ತ |
|---|---|---|
| 1 | ಆಹ್ವಾನ ಪತ್ರಿಕೆ:210 ಜಿ.ಎಸ್.ಎಂ.ಆರ್ಟ್ ಕಾಗದ ಬಳಸಿ, 1/8 ಡೆಮಿ ಆಕಾರ, ನಾಲ್ಕು ಪುಟ ಬಹುವರ್ಣದಲ್ಲಿ ಮುದ್ರಣ ಮಾಡಿದ ಲಕೋಟೆಎ ಸಹಿತ 3000 ಆಹ್ವಾನ ಪತ್ರಿಕೆಗಳನ್ನು ಮುದ್ರಿಸಲು | 45,000.00 |
| 2 | ಪೌರ ಕಾರ್ಮಿಕರ ಸಂಘದ ಪದಾಧಿಕಾರಿಗಳೂ, ಅತಿಥಿ ಗಣ್ಯ ವ್ಯಕ್ತಿಗಳಿಗೆ 400 ಬ್ಯಾಡ್ಜ್‌ಗಳು–3" ವ್ಯಾಸದ ತ್ರಿವರ್ಣ ಟೇಪಿನ ಬಹುವರ್ಣಿತ ಬ್ಯಾಡ್ಜ್‌ಗಳು ಅಂದಾಜು | 15,000.00 |
| 3 | ಬ್ಯಾನರ್‌ಗಳು:10X3 ಅಡಿ ವಿಸ್ತೀರ್ಣದ ಬಹುವರ್ಣದ ಫ್ಲೆಕ್ಸ್ ಬ್ಯಾನರ್‌ಗಳು–100 | 1,00,000.00 |
| 4 | ಕರ ಪತ್ರಗಳು:ಎ4 ಗಾತ್ರ ಏಕವರ್ಣ–20,000 ಪ್ರತಿಗಳು | 30,000.00 |
| 5 | ಫ್ಲೆಕ್ಸ್‌ಗಳು: 10X8 ಅಡಿ ವಿಸ್ತೀರ್ಣದ ಮರದ ಚೌಕಟ್ಟು ಹೊಂದಿರುವ ಫ್ಲೆಕ್ಸ್ ಕಟೌಟ್‌ಗಳು–20 | 1,50,000.00 |
| 6 | ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರಿಗೆ ಸನ್ಮಾನ ಮಾಡಲು ವಿಶೇಷವಾದ ಏಲಕ್ಕಿ ಹಾರ ಹಾಗೂ ವಿಶೇಷವಾದ ಶಾಲು ತಲಾ 20 ಸಂಖ್ಯೆಯಂತೆ, | 60,000.00 |
| 7 | ಭಾರತ ರತ್ನ ಡಾ॥ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ 2008 ರ ಸಮಾರಂಭದಲ್ಲಿ ನಿವೃತ್ತ ಹಾಗೂ ಉತ್ತಮ ನೌಕರರಿಗೆ ಸನ್ಮಾನಿಸಲು ಮೊಮೆಂಟೋ | 7,00,000.00 |
| 8 | ಭಾರತ ರತ್ನ ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ 2008 ರ ಸಮಾರಂಭದಲ್ಲಿ ನಿರೂಪಣೆ, ಉದ್ಘಾಟನೆ ಹಾಗೂ ಪ್ರಾರ್ಥನೆ ವ್ಯವಸ್ಥೆ. | 12,000.00 |
| 9 | ಭಾರತ ರತ್ನ ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಸಲುವಾಗಿ | 3,00,000.00 |

| | | |
|---|---|---|
| 10 | ಡಾ:ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರ ಕಾರ್ಮಿಕರ ದಿನಾಚರಣೆಯ ಬಗ್ಗೆ ಹೆಚ್ಚಿನ ಪ್ರಚಾರ ನೀಡಲು ಪತ್ರಿಕೆಗಳಲ್ಲಿ ಜಾಹೀರಾತು ಪ್ರಚಾರದ ಬಾಬ್ತು | 5,00,000.00 |
| 11 | ವೇದಿಕೆ, ಬ್ಯಾಕ್‌ಡ್ರಾಪ್, ಧ್ವನಿವರ್ಧಕ, ಬೆಳಕು, ಅಲಂಕರಣ | 5,00,000.00 |
| 12 | ಎಲ್ಲಾ ಪೌರ ಕಾರ್ಮಿಕರಿಗೆ, ಗ್ಯಾಂಗ್‌ಮನ್‌ಗಳಿಗೆ, ತೋಟಗಾರಿಕೆ ಮಾಲಿಗಳಿಗೆ, ಸ್ಯಾನಿಟರಿ ದಫೇದಾರ್‌ಗಳಿಗೆ ಸುವರ್ಣ ಕರ್ನಾಟಕದ ಕೊಡುಗೆ ರೂ.1,250/- | 92,00,000.00 |
| 13 | ಎಲ್ಲಾ ಪೌರ ಕಾರ್ಮಿಕರಿಗೆ ಗ್ಯಾಂಗ್‌ಮನ್‌ಗಳಿಗೆ, ತೋಟಗಾರಿಕೆ ಮಾಲಿಗಳಿಗೆ, ಸ್ಯಾನಿಟರಿ ದಫೇದಾರ್‌ಗಳಿಗೆ ಎ.ಎಲ್.ಓ., ಎಂ.ಸಿ. ಗ್ಯಾಂಗ್‌ಮೆನ್‌ಗಳಿಗೆ ಮತ್ತು ಅವರ ಮಕ್ಕಳಿಗೆ ಕ್ರೀಡೆಗಳನ್ನು ನಡೆಸಿ ಬಹುಮಾನಗಳನ್ನು ಚೆಕ್ ಮುಖಾಂತರ ನೀಡುವುದು, ಕ್ರೀಡೆಗಳಿಗಾಗಿ ಹಾಗೂ ವಿಜೇತರಿಗೆ ಬಹುಮಾನ ವಿತರಣೆಗಾಗಿ | 50,00.000.00 |
| 14 | ಎಲ್ಲಾ ಪೌರಕಾರ್ಮಿಕರಿಗೆ ಗ್ಯಾಂಗ್‌ಮನ್‌ಗಳಿಗೆ, ತೋಟಗಾರಿಕೆ ಮಾಲಿಗಳಿಗೆ, ಸ್ಯಾನಿಟರಿ ದಫೇದಾರ್‌ಗಳಿಗೆ ಮತ್ತು ಅವರ ಮಕ್ಕಳಿಗೆ ಕ್ರೀಡೆಗಳನ್ನು ನಡೆಸುವ ಸಂದರ್ಭದಲ್ಲಿ ಶಾಮಿಯಾನ, ಕರಪತ್ರ, ಛಾಯಾಚಿತ್ರ, ಕ್ರೀಡಾ ಸಾಮಗ್ರಿಗಳು, ಆಟದ ಮೈದಾನಗಳ ಅಂಕಣಗಳ ಗುರುತುಗಾರರ, ತೀರ್ಪುಗಾರರಾಗಿ ಭಾಗವಹಿಸುವ ದೈಹಿಕ ಶಿಕ್ಷಕರಿಗೆ ಸಂಭಾವನೆ, ರಂಗೋಲಿ ಪುಡಿ, ಗ್ಲೂಕೋಸ್, ಲೇಖನ ಸಾಮಗ್ರಿಗಳು, ಮುಂತಾದವುಗಳು. | 3,00,000.00 |
| 15 | ಡಾ॥ ಬಿ.ಆರ್.ಅಂಬೇಡ್ಕರ್ ದಿನಾಚರಣೆಯ ಅಂಗವಾಗಿ ಕ್ರೀಡೆಗಳು ನಡೆಯುವ ದಿವಸಗಳಂದು ಊಟದ ವ್ಯವಸ್ಥೆಗಾಗಿ ಒಟ್ಟು 11 ದಿವಸಗಳು (ಒಂದು ದಿನದ ಕ್ರೀಡೆಗೆ ರೂ.60,000/-) | 6,60,000.00 |
| 16 | ಡಾ॥ ಬಿ.ಆರ್.ಅಂಬೇಡ್ಕರ್ ದಿನಾಚರಣೆಯ ದಿನದಂದು ಎಲ್ಲಾ ಪೌರಕಾರ್ಮಿಕರಿಗೆ ಉಪಹಾರ ಹಾಗೂ ನಂದಿನಿ ಸಿಹಿ ಪ್ಯಾಕೇಟ್‌ಗಳನ್ನು ವಿತರಿಸುವ ಖರ್ಚು | 8,00,000.00 |
| 17 | ಇತರೆ ಸಾದಿಲ್ವಾರು | 10,000.00 |
| | ಒಟ್ಟು ಮೊತ್ತ | 1,83,82,000.00 |

ಕಾರ್ಯಕ್ರಮಕ್ಕೆ ತಗಲುವ ಖರ್ಚು ವೆಚ್ಚದ ಅಂದಾಜು ಪಟ್ಟಿ ರೂ.1,83,82,000/- (ಒಂದು ಕೋಟಿ ಎಂಬತ್ತೂ‌ರು ಲಕ್ಷದ ಎಂಭತ್ತೆರಡು ಸಾವಿರ ಮಾತ್ರ) ಗಳಾಗಿದ್ದು, ಸದರಿ ವೆಚ್ಚವನ್ನು ಪ್ರಸಕ್ತ ಸಾಲಿನ ಲೆಕ್ಕ ಶೀರ್ಷಿಕೆ 02, ಸಾಮಾನ್ಯ ಆಡಳಿತ, ಸಭೆ-ಸಮಾರಂಭಗಳು, ಪೌರಕಾರ್ಮಿಕರ ದಿನಾಚರಣೆ, ಶೀರ್ಷಿಕೆಯಿಂದ ಭರಿಸಲು ಉದ್ದೇಶಿಸದ್ದು, ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯ: ಸಂಖ್ಯೆ:383/2008-09**

ವಾರ್ಡ್ ಸಂಖ್ಯೆ:79ರ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

| ಕ್ರ. ಸಂ. | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ(ಲಕ್ಷ ರೂ.ಗಳಲ್ಲಿ) | ವರ್ಕ್ ಕೋಡ್ ನಂಬರ್ | ಗುತ್ತಿಗೆದಾರರ ಹೆಸರು | ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ | ತಾಂತ್ರಿಕ ಮಂಜೂರಾತಿ ಸಂಖ್ಯೆ ಹಾಗೂ ದಿನಾಂಕ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | 79 | ವಾರ್ಡ್ ಸಂಖ್ಯೆ:79ರ ಬ್ರಾಡ್‌ವೇ ರಸ್ತೆಯಿಂದ ಕಾಲೇಜ್‌ವರೆಗೆ 'ಸಿ' ಸ್ಟೇಷನ್ ರಸ್ತೆಯ ಪಾದಚಾರಿ ಮಾರ್ಗದ ಅಭಿವೃದ್ಧಿ ಕಾಮಗಾರಿ ಬಗೆ. | 2.00 | 079-07 I-Y-E R-IM-001 | ಶ್ರೀ.ಏಜಾಜ್ | ಕಾ.ಅ (ಶಿವಾಜಿನಗರ) 04/07-08 ತಾ:22/05/07 | ಕಾ.ಅ (ಶಿವಾಜಿನಗರ) 05/07-08 ತಾ:22/05/07 |
| 2 | 79 | ವಾರ್ಡ್ ಸಂಖ್ಯೆ:79ರಲ್ಲಿ 'ಸಿ' ಸ್ಟೇಷನ್ ರಸ್ತೆಯಲ್ಲಿ ಪೆಟ್ರೋಲ್ ಬಂಕ್‌ನಿಂದ ಕಾಲೇಜ್ ವರೆಗೆ ಚರಂಡಿ ಅಭಿವೃದ್ಧಿ ಕಾಮಗಾರಿ | 2.00 | 079-07 I-Y-E D-IM-001 | ಇಲಾಖಾ ವತಿಯಿಂದ | ಕಾ.ಅ (ಶಿವಾಜಿನಗರ) 09/07-08 ತಾ04/05/07 | ಕಾ.ಅ (ಶಿವಾಜಿನಗರ) 09/07-08 ತಾ04/05/07 |

ಮೇಲ್ಕಂಡ ಕಾಮಗಾರಿಗಳ ಅಂದಾಜು ಮೊತ್ತ ರೂ.2.00 ಲಕ್ಷಗಳಾಗಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿದ್ದು, ಆಡಳಿತಾತ್ಮಕ ಮಂಜೂರಾತಿ ಹಾಗೂ ತಾಂತ್ರಿಕ ಮಂಜುರಾತಿ ಪಡೆಯಲಾಗಿದೆ. ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರು ವಿಭಾಗದ 2007-08ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ.

ಸದರಿ ಕಾಮಗಾರಿಗಳನ್ನು ಈ ಹಿಂದಿನ ಮಹಾಪೌರರು ನೀಡಿದ ನಿರ್ದೇಶನದಂತೆ ಅನುಮೋದನೆ ನಿರೀಕ್ಷಿಸಿ ತುಂಡುಗುತ್ತಿಗೆ/ಇಲಾಖಾವತಿಯಿಂದ ಕೈಗೊಂಡು ನಿರ್ವಹಿಸಿರುವುದಾಗಿ ಹಾಗೂ ಸದರಿ ಕಾಮಗಾರಿಗಳು ತುರ್ತಾಗಿ ನಿರ್ವಹಿಸಬೇಕಾಗಿದ್ದರಿಂದ ಈಗಾಗಲೇ ತುಂಡುಗುತ್ತಿಗೆ/ಇಲಾಖಾವತಿಯಿಂದ ಕೈಗೊಂಡಿರುವ ಕ್ರಮವನ್ನು ತಾಂತ್ರಿಕ ಜಾಗೃತದಳ ಕೋಶದಿಂದ ಪರಿಶೀಲಿಸಿ ಒಪ್ಪಿಗೆ ಪಡೆಯಲಾಗಿರುತ್ತದೆಂದು ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ) ರವರು ತಿಳಿಸುತ್ತಾ, ನಿರ್ವಹಿಸಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿರುತ್ತಾರೆ. ಈ ಬಗ್ಗೆ ಅಪರ ಆಯುಕ್ತರು (ಪೂರ್ವ) ರವರು ಮಂಡಿಸಿರುವ ಅನುಮೋದನೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ನಮೂದಿಸಿರುವಂತೆ ತುಂಡುಗುತ್ತಿಗೆ/ ಇಲಾಖಾವತಿಯಿಂದ ತೆಗೆದುಕೊಂಡಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೋಟಗಾರಿ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:363/2008–09**

Land Scape Works for Median from Hebbal Flyover to IAF,Bangalore International Airport Flyover Road. BBMP.

**ಪ್ರಸ್ತಾವನೆ:**

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೀಡಿಯನ್‌ನಲ್ಲಿ ಹೆಬ್ಬಾಳ ಫ್ಲೈ ಓವರ್‌ನಿಂದ ಐಎಎಫ್‌ರವರೆಗೆ ಭೂವಿನ್ಯಾಸ ಹಾಗೂ ಅಭಿವೃದ್ಧಿ ಕೆಲಸಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರೂ.76.60 ಲಕ್ಷಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು. Construction of Pass overs at busy junctions with State Government Grants, 2008–09ನೇ ಸಾಲಿನ ಲೆಕ್ಕ ಶೀರ್ಷಿಕೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಭರಿಸಲು ಉದ್ದೇಶಿಸಿದೆ ಹಾಗೂ ಕಾಮಗಾರಿ ಸಂಕೇತವನ್ನು ಪಡೆಯಲಾಗಿದ್ದು ಅದರಂತೆ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಲಾಗುವುದು. ಸದರಿ ಕಾಮಗಾರಿಯನ್ನು ಪಾರದರ್ಶಕ ಅದಿನಿಯಮದಂತೆ ಟೆಂಡರುಗಳನ್ನು ಆಹ್ವಾನಿಸಿ ಕಾಮಗಾರಿಗಳನ್ನು ನಿರ್ವಹಿಸಲಾಗುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಬ್ಬಾಳ ಫ್ಲೈ ಓವರ್ ನಿಂದ ಐಎಎಫ್,ರವರೆಗೆ ಭೂವಿನ್ಯಾಸ ಹಾಗೂ ಅಭಿವೃದ್ಧಿ ಕೆಲಸವನ್ನು ಟೆಂಡರ್ ಆಹ್ವಾನಿಸಿ ಅಭಿವೃದ್ಧಿ ಪಡಿಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:384/2008-09**

Strengthening & Improvements to pipeline from MES Road to Ragavendra Layout main road in Ward No.02 ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Strengthening & Improvements to pipeline from MES Road to Ragavendra Layout main road in Ward No.02 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎಸ್.ಕೆ.ಮೂರ್ತಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.60 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಅಪರ ಆಯುಕ್ತರು ಮತ್ತು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.97,56,972.30 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎಸ್.ಕೆ.ಮೂರ್ತಿ ರವರು ಶೇಕಡ 52.57% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 20.90% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.95% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪಶ್ಚಿಮ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,17,96,028.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎಸ್.ಕೆ.ಮೂರ್ತಿ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.95% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,17,96,028.00 (ರೂ.ಒಂದು ಕೋಟಿ ಹದಿನೇಳು ಲಕ್ಷದ ತೊಂಭತ್ತಾರು ಸಾವಿರದ ಇಪ್ಪತ್ತೆಂಟು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:385/2008-09**

ಜೆ.ಎನ್.ಎನ್.ಯು.ಆರ್.ಎಂ. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ದಕ್ಷಿಣ ವಲಯದ ದೀಪಾಂಜಲಿ ಕೆರೆಯ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಜೆ.ಎನ್.ಎನ್.ಯು.ಆರ್.ಎಂ. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ದಕ್ಷಿಣ ವಲಯದ ದೀಪಾಂಜಲಿ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದ ಅಂದಾಜು ಪಟ್ಟಿಯನ್ನು ದರಪಟ್ಟಿ 2007-08 ರಂತೆ ರೂ.94.50 ಲಕ್ಷಗಳಿಗೆ ತಯಾರಿಸಿದ್ದು, ಮುಖ್ಯ ಅಭಿಯಂತರರು (ಯೋಜನೆ-2) ರವರು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿ ರೂ.94.50 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:386/2008-09**

ಜೆ.ಎನ್.ಎನ್.ಯು.ಆರ್.ಎಂ. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬ್ಯಾಟರಾಯನಪುರ ವಲಯದ ಪುಟ್ಟೇನಹಳ್ಳಿ ಕೆರೆಯ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಜೆ.ಎನ್.ಎನ್.ಯು.ಆರ್.ಎಂ. ಸಹಯೋಗದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬ್ಯಾಟರಾಯನಪುರ ವಲಯದ ಪುಟ್ಟೇನಹಳ್ಳಿ ಕೆರೆಯ ಹಂತ-1ರ ಅಭಿವೃದ್ಧಿ ಕಾಮಗಾರಿಗೆ ಮಾನ್ಯ ಆಯುಕ್ತರವರ ಆದೇಶದಂತೆ ಅಂದಾಜು ಪಟ್ಟಿಯನ್ನು ದರಪಟ್ಟಿ 2007-08 ರಂತೆ ರೂ.90.00 ಲಕ್ಷಗಳಿಗೆ ತಯಾರಿಸಿದ್ದು, ಮುಖ್ಯ ಅಭಿಯಂತರರು (ಯೋಜನೆ-2) ರವರು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿ ರೂ.90.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

ವಿಷಯದ ಸಂಖ್ಯೆ:387/2008-09

Construction of Market Complex at Vasanthanagar in Ward No.78 ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Construction of Market Complex at Vasanthanagar in Ward No.78ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 09 ಟೆಂಡರ್‌ಗಳು ಸ್ವೀಕೃತವಾಗಿದ್ದು, 03 (ಮೂರು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಹೊಂಬೇಗೌಡ ಗುತ್ತಿಗೆದಾರರ, ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾರ್ಯಪಾಲಕ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀರಿಕ್ಷಿಸಿ ಟೆಂಡರ್ ಕರೆದಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.89,61,624.66 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಹೊಂಬೇಗೌಡ ರವರು ಶೇಕಡ 45.47% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 33.20% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಸಿಮೆಂಟ್ ಮತ್ತು ಸ್ಟೀಲ್‌ನ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 22.00% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಅಧೀಕ್ಷಕ ಅಭಿಯಂತರರು (ಎಂಪಿಇಡಿ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.1,19,36,659.57 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/116/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಹೊಂಬೇಗೌಡ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಸಿಮೆಂಟ್ ಮತ್ತು ಸ್ಟೀಲ್‌ನ ಬಿಟುಮಿನ್ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 22.00% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,19,36,659.57 (ರೂ.ಒಂದು ಕೋಟಿ ಹತ್ತೊಂಬತ್ತು ಲಕ್ಷದ ಮೂವತ್ತಾರು ಸಾವಿರದ ಆರುನೂರ ಐವತ್ತೊಂಬತ್ತು ಮತ್ತು ಪೈಸೆ ಐವತ್ತೇಳು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

**ವಿಷಯ: ಸಂಖ್ಯೆ:388/2008-09**

ಪುಟ್ಟೇನಹಳ್ಳಿ ವಿಭಾಗದ ಅವಲಹಳ್ಳಿ ಪೆಟ್ರೋಲ್ ಬಂಕ್‌ನಿಂದ ಗೊಲ್ಲಹಳ್ಳಿ ಬಸ್ ನಿಲ್ದಾಣದವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಪುಟ್ಟೇನಹಳ್ಳಿ ವಿಭಾಗದ ಅವಲಹಳ್ಳಿ ಪೆಟ್ರೋಲ್ ಬಂಕ್‌ನಿಂದ ಗೊಲ್ಲಹಳ್ಳಿ ಬಸ್ ನಿಲ್ದಾಣದವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, 2007-08ನೇ ಸಾಲಿನ ದರಪಟ್ಟಿಯಂತೆ ರೂ.40.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಇದು 2008-09ನೇ ಸಾಲಿನ ಕ್ರಿಯಾ ಯೋಜನೆಯಲ್ಲಿರುತ್ತದೆ. ಸದರಿ ಕಾಮಗಾರಿಯ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering - Public works (Zonal) Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.40.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು

ವಿಷಯ: ಸಂಖ್ಯೆ:388/2008-09

ಪುಟ್ಟೇನಹಳ್ಳಿ ವಿಭಾಗದ ಅವಲಹಳ್ಳಿ ಪೆಟ್ರೋಲ್ ಬಂಕ್‌ನಿಂದ ಗೊಲ್ಲಹಳ್ಳಿ ಬಸ್ ನಿಲ್ದಾಣದವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

ಪುಟ್ಟೇನಹಳ್ಳಿ ವಿಭಾಗದ ಅವಲಹಳ್ಳಿ ಪೆಟ್ರೋಲ್ ಬಂಕ್‌ನಿಂದ ಗೊಲ್ಲಹಳ್ಳಿ ಬಸ್ ನಿಲ್ದಾಣದವರೆಗಿನ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, 2007-08ನೇ ಸಾಲಿನ ದರಪಟ್ಟಿಯಂತೆ ರೂ.40.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿದ್ದು, ಇದು 2008-09ನೇ ಸಾಲಿನ ಕ್ರಿಯಾ ಯೋಜನೆಯಲ್ಲಿರುತ್ತದೆ. ಸದರಿ ಕಾಮಗಾರಿಯ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering – Public works (Zonal) Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.40.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

ವಿಷಯ: ಸಂಖ್ಯೆ:389/2008-09

ಪಟ್ಟೇನಹಳ್ಳಿ ವಿಭಾಗದ ಅಂಜನಾಪುರ ಮಸೀದಿಯಿಂದ ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಪಟ್ಟೇನಹಳ್ಳಿ ವಿಭಾಗದ ಅಂಜನಾಪುರ ಮಸೀದಿಯಿಂದ ಸುಬ್ರಹ್ಮಣ್ಯ ದೇವಸ್ಥಾನದ ರಸ್ತೆಗೆ ಡಾಂಬರೀಕರಣ ಮಾಡುವ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, 2007-08ನೇ ಸಾಲಿನ ದರಪಟ್ಟಿಯಂತೆ ರೂ.40.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಸಲ್ಲಿಸಿದ್ದು, ಇದು 2008-09ನೇ ಸಾಲಿನ ಕ್ರಿಯಾ ಯೋಜನೆಯಲ್ಲಿರುತ್ತದೆ. ಸದರಿ ಕಾಮಗಾರಿಯ ವೆಚ್ಚವನ್ನು 2008-09ನೇ ಸಾಲಿನ ಆಯವ್ಯಯದ Zonal Engineering - Public works (Zonal) Zone works ಲೆಕ್ಕಶೀರ್ಷಿಕೆಯಲ್ಲಿ ಭರಿಸಲು ಉದ್ದೇಶಿಸಿದ್ದು, ಕಾಮಗಾರಿ ಸಂಕೇತ ಪಡೆಯಲಾಗಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿ ಮೊತ್ತ ರೂ.40.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:30/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:05/08/2008 ರ ನಡವಳಿಗಳು

ವಿಷಯದ ಸಂಖ್ಯೆ:354/2008-09

ಬ್ಯಾಟರಾಯನಪುರ ವಲಯದಲ್ಲಿ ಬರುವ ಮಳೆ ನೀರುಗಾಲುವೆಗೆ ಸಂಬಂಧಿಸಿದಂತೆ, ವಿವರವಾದ ಅಂದಾಜು ಹಾಗೂ ಯೋಜನೆ ತಯಾರಿಸಲು ಸಲಹೆಗಾರರನ್ನು ನೇಮಿಸುವ ಬಗ್ಗೆ.

**ಪ್ರಸ್ತಾವನೆ:**

ಬ್ಯಾಟರಾಯನಪುರ ವಲಯ ವ್ಯಾಪ್ತಿಯಲ್ಲಿನ 105 ಕಿ.ಮೀ. ಮಳೆನೀರುಗಾಲುವೆಗಳ ಅಭಿವೃದ್ಧಿಗೆ ಸಮಗ್ರ ಯೋಜನೆ ತಯಾರಿಸಬೇಕಾಗಿದ್ದು, ಈ ಯೋಜನೆಗೆ ಈ ಕೆಳಕಂಡ ವಿವರಗಳನ್ನು ಸಂಗ್ರಹಿಸಿ ಅಳವಡಿಸಿದ D.P.R.ನ್ನು ತಯಾರಿಸಬೇಕಾಗಿರುತ್ತದೆ.

1)Detail topographic and Geotechnical survey.
2)Assessment of quantity & quality of drainage discharge.
3)Analysis of the existing system.
4)Prevention of sewerage entering drain.
5)Hydraulic & structural design & drawing.
6)Cost estimate & bill of quantities.
7)Technical specification.
8)Cost Benefit analysis.
9)Preparation of D.P.R. in conformity with JNNURM guidelines.
10)Project appraisal to State & Central Government and get approval.
11)Bid Document.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿಯಲ್ಲಿ ಹೊಸದಾಗಿ ಸೇರಿರುವ ಬ್ಯಾಟರಾಯನಪುರ ವಲಯಕ್ಕೆ ಸಂಬಂಧಿಸಿದಂತೆ ಮಳೆನೀರುಗಾಲುವೆಯ ನವೀಕರಣ ಯೋಜನೆಯನ್ನು ತಯಾರಿಸಲು ಮಾನ್ಯ ಆಯುಕ್ತರವರು ಆದೇಶಿಸಿದ್ದು, ಅದರಂತೆ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಕೆಳಕಂಡ ಇಬ್ಬರು ಗುತ್ತಿಗೆದಾರರು (ಸಲಹೆಗಾರರು) ಭಾಗವಹಿಸಿರುತ್ತಾರೆ.

1)M/S Stup Consultant Pvt. Ltd. Bangalore.
2)M/S TTI Consultant Bangalore.

ಇಬ್ಬರು ಸಲಹೆಗಾರರು ತಾಂತ್ರಿಕ ಬಿಡ್ಡ್‌ಗಳನ್ನು ತೆರೆಯಲಾಗಿ, ತಾಂತ್ರಿಕ ಬಿಡ್ಡ್‌ನಲ್ಲಿ M/S Stup Consultant ರವರು ಅರ್ಹರಾಗಿರುತ್ತಾರೆ. ಇವರ ಆರ್ಥಿಕ ಬಿಡ್ಡ್ ಅನ್ನು ಮುಖ್ಯ ಅಭಿಯಂತರರ ಅನುಮೋದನೆ ಪಡೆದು ತೆರೆಯಲಾಗಿ ವಿವರಗಳು ಕೆಳಕಂಡಂತಿವೆ;

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಯೋಜನೆಯ ನಮೂದಿಸಿರುವ ಮೊತ್ತ ರೂ.ಕೋಟಿಯಲ್ಲಿ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ.ಕೋಟಿಯಲ್ಲಿ |
|---|---|---|---|
| 1 | M/S Stup Consultant | 276.00 | 2.36 |

. . . 2

M/S.Stup Consultant ರವರು ನಮೂದಿಸಿರುವ ಮೊತ್ತ ಹೆಚ್ಚಾದುದ್ದರಿಂದ, ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸಂಧಾನದ ನಂತರ ಗುತ್ತಿಗೆದಾರರು ಕೆಳಕಂಡಂತೆ ನಮೂದಿಸಿರುತ್ತಾರೆ.

| ಕ್ರ.ಸಂ | ಗುತ್ತಿಗೆದಾರರ ಹೆಸರು | ಯೋಜನೆಯು ನಮೂದಿಸಿರುವ ಮೊತ್ತ ರೂ ಕೋಟಿಯಲ್ಲಿ | ಗುತ್ತಿಗೆದಾರರು ನಮೂದಿಸಿರುವ ರೂ.ಕೋಟಿಯಲ್ಲಿ | ಸಂಧಾನಿಸಿದ ಮೊತ್ತ ರೂ.ಕೋಟಿಯಲ್ಲಿ | ಶೇಕಡ |
|---|---|---|---|---|---|
| 1 | M/S Stup Consultant | 276.00 | 2.36 | 2.25 | 0.82% |

ಮೇಲಿನ ಅಂಶ ಪರಿಶೀಲಿಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿರುವ ಮೊತ್ತ ರೂ.2,25,28,978.00 ಗಳನ್ನು ಅಂದಾಜು ಮೊತ್ತ ರೂ. 276.00 ಕೋಟಿಗಳಿಗೆ ತುಲನೆ ಮಾಡಿದಾಗ ಶೇಕಡ 0.82% ರಷ್ಟು ಕಡಿಮೆ ಆಗಿರುವುದು.

ಬ್ಯಾಟರಾಯನಪುರ ವಲಯವು ಪಾಲಿಕೆಗೆ ಹೊಸದಾಗಿ ಸೇರಿರುವುದರಿಂದ ಈ ವಲಯದ ಮಳೆನೀರುಗಾಲುವೆಗಳ ಅಭಿವೃದ್ಧಿ ಶೀಘ್ರವಾಗಿ ಆಗಬೇಕಾಗಿರುವುದರಿಂದ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1.ಸಲಹೆಗಾರರ ವಿವರವಾದ ಯೋಜನೆ ತಯಾರಿಸಲು D.P.R ಒಪ್ಪಿಗೆ
2.ಗುತ್ತಿಗೆದಾರ ಸಂಸ್ಥೆಯವರು ಸಲ್ಲಿಸಿರುವ ರೂ.2.25 ಕೋಟಿಗೆ ಮೊತ್ತಕ್ಕೆ ಒಪ್ಪಿಗೆ.
3.ಸದರಿ ಯೋಜನೆಯನ್ನು State empower Committe ಯ JNNURM ಅಡಿಯಲ್ಲಿ ಮಂಡಿಸಲು ಹಾಗೂ ಈ ಯೋಜನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲು ಒಪ್ಪಿಗೆ.

ಮೇಲಿನ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾಮಾಜಿಕ ಶಿಕ್ಷಣ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/08/2008 ರ ನಡವಳಿಗಳು**

ವಿಷಯದ ಸಂಖ್ಯೆ:21/2008–09

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರ ಸಭಾಂಗಣದ ಮುಂಭಾಗದ ಉದ್ಯಾನವನದಲ್ಲಿ ಪೌರ ಕಾರ್ಮಿಕ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪನವರ ಕಂಚಿನ ಪ್ರತಿಮೆ ಸ್ಥಾಪಿಸುವ ಬಗ್ಗೆ.

**ಪ್ರಸ್ತಾವನೆ:**

ಪ್ರಧಾನ ಕಾರ್ಯದರ್ಶಿ, ಬೆಂಗಳೂರು ಸಿಟಿ ಕಾರ್ಪೋರೇಷನ್ ವರ್ಕರ್ಸ್ ಫೆಡರೇಷನ್‌ರವರು ಮಾನ್ಯ ಸಮಾಜ ಕಲ್ಯಾಣ ಸಚಿವರಿಗೆ ದಿನಾಂಕ:14/04/2003 ರಂದು ಮನವಿಯನ್ನು ಸಲ್ಲಿಸಿ, ಪೌರಕಾರ್ಮಿಕರ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪರವರ ಕಂಚಿನ ಪ್ರತಿಮೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಸಭಾಂಗಣದ ಮುಂಭಾಗದ ಉದ್ಯಾನವನದಲ್ಲಿ ಪ್ರತಿಷ್ಠಾಪಿಸಲು ಕೋರಿರುತ್ತಾರೆ.

ಈ ವಿಷಯದಲ್ಲಿ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸಭೆಯ ದಿನಾಂಕ:28/07/2003 ರಲ್ಲಿ ಪೌರಕಾರ್ಮಿಕರ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪರವರ ಕಂಚಿನ ಪ್ರತಿಮೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯ ಪೌರ ಸಭಾಂಗಣದ ಮುಂಭಾಗದ ಉದ್ಯಾನವನದಲ್ಲಿ ಪ್ರತಿಷ್ಠಾಪಿಸಲು ನಿರ್ಣಯಿಸಲಾಗಿರುತ್ತದೆ.

ಆದರೆ ಈ ವಿಷಯವನ್ನು ಪರಿಶೀಲಿಸಿ, ಮಾನ್ಯ ಆಯುಕ್ತರವರು ಈ ಕೆಳಕಂಡಂತೆ ಅಭಿಪ್ರಾಯಿಸಿ ಸರ್ಕಾರಕ್ಕೆ ದಿನಾಂಕ:22/12/2003 ರಲ್ಲಿ ಪತ್ರ ಬರೆದಿದ್ದಾರೆ. "ಇದರಲ್ಲಿ ಈಗಾಗಲೇ ಪಾಲಿಕೆ ಮುಂಭಾಗದ ನರಸಿಂಹರಾಜ ಚೌಕದಲ್ಲಿ ಬೆಂಗಳೂರು ನಗರದ ನಿರ್ಮಾತೃ ಶ್ರೀ. ಕೆಂಪೇಗೌಡರ ಪ್ರತಿಮೆಯನ್ನು ಸ್ಥಾಪಿಸಲಾಗಿರುವ ಕಾರಣದಿಂದ ಪೌರಕಾರ್ಮಿಕರ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪರವರ ಪ್ರತಿಮೆಯನ್ನು ಪಾಲಿಕೆಯ ಪೌರ ಸಭಾಂಗಣದ ಮುಂದೆ ಸ್ಥಾಪಿಸುವುದು ಸಮಂಜಸವಲ್ಲವೆಂದು ಅಭಿಪ್ರಾಯಿಸಿ" ದಿನಾಂಕ:28/07/2003 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮತ್ತು ದಿನಾಂಕ:30/09/2003 ರ ನಗರ ಪಾಲಿಕೆ ಸಭೆಯ ನಿರ್ಣಯದ ಪ್ರತಿಗಳನ್ನು ಪತ್ರದೊಂದಿಗೆ ಲಗತ್ತಿಸಿ ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಈ ಬಗ್ಗೆ ಸರ್ಕಾರದ ದಿನಾಂಕ:08/03/2004 ರಂದು ಕಾರಣ ಕೇಳಿ ಪತ್ರ ಜಾರಿ ಮಾಡಿದ ನೋಟೀಸ್‌ಗೆ ಸ್ಪಷ್ಟೀಕರಣ ನೀಡುತ್ತಾ, ದಿನಾಂಕ:08/08/2007, ಸಂಖ್ಯೆ:ಎ3(2)ಪಿಆರ್/77/2003–04 ರಂದು ಸರ್ಕಾರಕ್ಕೆ ದಿವಂಗತ ಐ.ಪಿ.ಡಿ. ಸಾಲಪ್ಪರವರ ಪ್ರತಿಮೆಯನ್ನು ಪಾಲಿಕೆ ಆವರಣದಲ್ಲಿ ಸ್ಥಾಪಿಸಲು ಅನುಮೋದನೆ ಕೋರಿ ಪತ್ರ ಬರೆಯಲಾಗಿತ್ತು.

ಈ ಸಂಬಂಧ ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ದಿನಾಂಕ:17/01/2008 ರಂದು ಸಂಖ್ಯೆ:ನಅಇ/149/ಎಂ.ಎನ್.ಜಿ./2007 ಪತ್ರ ಬರೆದು ದಿನಾಂಕ:30/09/2003 ರ ಪಾಲಿಕೆ ಸಭೆಯ ವಿಷಯ ಸಂಖ್ಯೆ:3 (68)ರಲ್ಲಿನ ಪಾಲಿಕೆ ನಿರ್ಣಯ ಸರ್ಕಾರದ ಹಂತದಲ್ಲಿ ರದ್ದುಪಡಿಸಿಲ್ಲ. ಆದ ಕಾರಣ ನಿಯಮಾವಳಿಯ ಚೌಕಟ್ಟಿನಲ್ಲಿ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಪಾಲಿಕೆ ತನ್ನ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ದಿನಾಂಕ:24/03/2008 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ಸಭೆ ನಡೆದು, ದಿನಾಂಕ: 14/04/2008 ರಂದು ಡಾ॥ಬಿ.ಆರ್.ಅಂಬೇಡ್ಕರ್ ಜಯಂತಿ ಹಾಗೂ ಪೌರಕಾರ್ಮಿಕರ ದಿನಾಚರಣೆಯನ್ನು ಪಾಲಿಕೆ ವತಿಯಿಂದ ಆಚರಿಸಲು ತೀರ್ಮಾನಿಸಲಾಗಿದೆ.

ದಿನಾಂಕ:25/03/2008 ರಂದು ನಡೆದ ಸ್ವಾಗತ ಸಮಿತಿ ಸಭೆಯಲ್ಲಿ ವಿವಿಧ ಪೌರಕಾರ್ಮಿಕರ ಸಂಘದ ಸದಸ್ಯರು ದಿವಂಗತ ಐ.ಪಿ.ಡಿ. ಸಾಲಪ್ಪರವರ ಪ್ರತಿಮೆಯನ್ನು ದಿನಾಂಕ:14/04/2008 ರಂದೇ ಈಗಾಗಲೇ ನಿರ್ಣಯವಾಗಿರುವಂತೆ ನಿರ್ಮಾಣ ಮಾಡಿರುವ ಪೀಠದಲ್ಲಿ ಪ್ರತಿಷ್ಠಾಪಿಸಿ ಅನಾವರಣಗೊಳಿಸುವಂತೆ ಆಯುಕ್ತರಿಗೆ ಒತ್ತಾಯದೊಂದಿಗೆ ಕೋರಿದ್ದು. ಈ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮಕ್ಕೆ ಮಾನ್ಯ ಆಡಳಿತಗಾರರಿಗೆ ಟಿಪ್ಪಣಿ ಸಿದ್ಧಪಡಿಸಿ ಮಂಡಿಸಲು ಜಂಟಿ ಆಯುಕ್ತರು (ಕಲ್ಯಾಣ) ರವರಿಗೆ ಆಯುಕ್ತರು ಸೂಚಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೌರ ಸಭಾಂಗಣದ ಮುಂಭಾಗದ ಉದ್ಯಾನವನದಲ್ಲಿ ಪೌರಕಾರ್ಮಿಕರ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪರವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಅನಾವರಣಗೊಳಿಸುವುದಕ್ಕೆ ಸರ್ಕಾರದ ಅನುಮೋದನೆಯು ದಿನಾಂಕ:17/01/2008 ರಲ್ಲಿ ದೊರಕಿದೆ.

ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ದಿನಾಂಕ:14/04/2008 ರಂದು ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿ ಹಾಗೂ ಪೌರಕಾರ್ಮಿಕ ದಿನಾಚರಣೆಯಂದೇ ಪೌರ ಸಭಾಂಗಣದ ಮುಂಭಾಗದ ಉದ್ಯಾನವನದಲ್ಲಿ ಪೌರಕಾರ್ಮಿಕರ ನಾಯಕ ದಿವಂಗತ ಐ.ಪಿ.ಡಿ. ಸಾಲಪ್ಪ ರವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪಿಸಿ ಅನಾವರಣಗೊಳಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28/07/2008 ರ ಟಿಪ್ಪಣಿ.

<u>ತೀರ್ಮಾನ:</u> Approved. Keep Chief Minister and Ministers in-charge of Bengalore city informed before starting work.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:390/2008-09**

Asphalting to Ring Road from Mysore Road junction to Silk Board junction via.J.P.Nagar BTM Layout, Ch:13.25 to 14.00 Km Left side Carriageway (Northern side) ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Asphalting to Ring Road from Mysore Road junction to Silk Board junction via.J.P.Nagar BTM Layout, Ch:13.25 to 14.00 Km Left side Carriageway (Northern side) ರ ಕಾಮಗಾರಿಗೆ ಅಂದಾಜು ಪಟ್ಟಿಯನ್ನು 2007-08ನೇ ಸಾಲಿನ ದರಪಟ್ಟಿಯನ್ವಯ ರೂ.48,50,000.00 ಗಳಿಗೆ ತಯಾರಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, ಎರಡು ಟೆಂಡರ್‌ಗಳು ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೇಂದ್ರ-2) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎಸ್.ವೇಣುಗೋಪಾಲ ರೆಡ್ಡಿರವರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ಟೆಂಡರ್‌ಗಿಟ್ಟ ಮೊಬಲಗು ರೂ.39,41,230.05 ಗಳಾಗಿದ್ದು, ಗುತ್ತಿಗೆದಾರರಾದ ಶ್ರೀ.ಎಸ್.ವೇಣುಗೋಪಾಲ ರೆಡ್ಡಿರವರು ನಮೂದಿಸಿರುವ ಮೊತ್ತ ರು.60,75,572.10 ಗಳನ್ನು ಟೆಂಡರ್ ಮೊತ್ತಕ್ಕೆ ಹೋಲಿಸಿದಾಗ ಶೇಕಡ 54.15 ರಷ್ಟು ಹೆಚ್ಚಾಗಿದ್ದು, ಸದರಿ ಹೆಚ್ಚುವರಿ ದರಗಳನ್ನು ಚಾಲ್ತಿ ದರಗಳಿಗೆ ಹೋಲಿಸಿದಾಗ ಇದು ಶೇ.35.68 ರಷ್ಟು ಹೆಚ್ಚುವರಿಯಾಗಿರುತ್ತದೆ. ನಮೂದಿಸಿದ ದರವು ಹೆಚ್ಚಿನದಾಗಿದ್ದುದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಮೊತ್ತವನ್ನು ರೂ.51,25,080.50 ಗಳಿಗೆ ಇಳಿಸಿದ್ದು, ಇದು ಶೇಕಡ 30.04 ರಷ್ಟು ಹೆಚ್ಚುವರಿಯಾಗಿರುತ್ತದೆ. ಸದರಿ ಸಂಧಾನದ ದರಗಳನ್ನು ಪ್ರಸಕ್ತ ಸಾಲಿನ ದರಪಟ್ಟಿಗೆ (2007-08) ಹಾಗೂ ಬಿಟುಮಿನ್‌ನ ಮಾರುಕಟ್ಟೆಯ ದರಗಳ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಪ್ರಚುರಪಡಿಸಿರುವ ದರಗಳಿಗೆ ಹೋಲಿಸಿದಾಗ ಶೇಕಡ 14.45 ರಷ್ಟು ಹೆಚ್ಚಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.48,50,000.00 ಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಕನಿಷ್ಠ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎಸ್.ವೇಣುಗೋಪಾಲ್ ರೆಡ್ಡಿ ರವರು ನಮೂದಿಸಿರುವ ಶೇಕಡ 30.04 ರಷ್ಟು ಅಥವಾ ರೂ.51,25,080.50 ಗಳ ದರಗಳನ್ನು ಪ್ರಸಕ್ತ 2007-08ನೇ ಸಾಲಿನ ದರಪಟ್ಟಿಗೆ ಹಾಗೂ ಬಿಟುಮಿನ್ ಮಾರುಕಟ್ಟೆಯ ದರಗಳಿಗೆ ಹೋಲಿಸಿದಾಗ ಬಂದಂತಹ ಶೇಕಡ 14,45 ರಷ್ಟು ಹೆಚ್ಚುವರಿಯ ಟೆಂಡರ್‌ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:05/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/08/2008 ರ ನಡವಳಿಗಳು**

**ವಿಷಯದ ಸಂಖ್ಯೆ:391/2008–09**

ಸಂಜಯನಗರ ರಸ್ತೆಯನ್ನು (ಬಳ್ಳಾರಿ ರಸ್ತೆಯಿಂದ ಅಶ್ವಥ್‌ನಗರದ ವೃತ್ತದವರೆಗೆ) 30.00ಮೀ. ಅಗಲೀಕರಣಗೊಳಿಸುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಶ್ರೀ.ಕಟ್ಟಾ ಸುಬ್ರಮಣ್ಯ ನಾಯ್ಡು, ಮಾನ್ಯ ಅಬಕಾರಿ ಸಚಿವರು ದಿನಾಂಕ:03/06/2008 ರಂದು ಮಾನ್ಯ ಆಯುಕ್ತರಿಗೆ ನೀಡಿರುವ ಪತ್ರದಲ್ಲಿ ಬಳ್ಳಾರಿ ರಸ್ತೆಯಿಂದ (ಸಂಜಯನಗರ ರಸ್ತೆ) ಅಶ್ವಥ್‌ನಗರ ವೃತ್ತದವರೆಗಿನ ರಸ್ತೆಯು ಬಹಳ ಕಿರಿದಾಗಿದ್ದು, ವಾಹನ ಸಂಚಾರ ದಟ್ಟಣೆಯೂ ಅತಿಯಾಗಿರುವುದರಿಂದ ದಿನದ ಬಹಳಷ್ಟು ವೇಳೆ ಟ್ರಾಫಿಕ್ ಜಾಮ್ ಆಗುತ್ತಿರುವುದರಿಂದ ರಸ್ತೆಯನ್ನು ಅಗಲೀಕರಣಗೊಳಿಸಲು ಕೋರಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಆಕ್ಟ್ 1961 ರ ಸೆಕ್ಷನ್ 14(ಬಿ)ರ ಅನ್ವಯ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ:ಯು.ಡಿ.ಡಿ/154/ಬಿ.ಇ.ಎಂ/ಆರ್.ಯು.ಪಿ.ಆರ್.ಎ/2004, ದಿನಾಂಕ:18/01/2005 ರ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಅಗಲೀಕರಣಗೊಳಿಸಲು ಅಗತ್ಯವಾಗಿ ಬೇಕಾಗಿರುವ ಜಮೀನನ್ನು ಆಸ್ತಿಯ ಮಾಲೀಕರಿಂದ ಋಣ ಮುಕ್ತವಾಗಿ ಟಿ.ಡಿ.ಆರ್. ಯೋಜನೆ ಅಡಿಯಲ್ಲಿ ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೆ ಅಧಿಕಾರ ನೀಡಲಾಗಿದೆ. ಅದರನ್ವಯ ಸದರಿ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸಲು ಈಗಿರುವ ರಸ್ತೆಯ ಸರಾಸರಿ ಅಗಲ 13.94 ಮೀಟರ್‌ನ್ನು 30.00 ಮೀಟರ್‌ಗೆ ಅಗಲೀಕರಣಗೊಳಿಸಲು ಅನುಮೋದನೆ ಮತ್ತು ಪ್ರಕಟಣೆ ಹೊರಡಿಸಲು ಅನುಮತಿ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:04/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:11/08/2008 ರ ನಡವಳಿಗಳು

ವಿಷಯದ ಸಂಖ್ಯೆ:392/2008-09

11ನೇ ಮುಖ್ಯರಸ್ತೆ, ಮಲ್ಲೇಶ್ವರಂ-ಶ್ರೀರಾಮಪುರ ಸೇತುವೆಯಿಂದ ನಿರ್ಮಲರಾಣಿ ಶಾಲೆಯವರೆಗಿನ (ಚಿತ್ರಶಿಲ್ಪಿ ವೆಂಕಟಪ್ಪ ರಸ್ತೆ) ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್, ಸಬ್-ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿಗಳಲ್ಲಿನ 11ನೇ ಮುಖ್ಯರಸ್ತೆ ಮಲ್ಲೇಶ್ವರಂ ಶ್ರೀರಾಮಪುರ ಸೇತುವೆಯಿಂದ ನಿರ್ಮಲರಾಣಿ ಶಾಲೆಯವರೆಗಿನ (ಚಿತ್ರಶಿಲ್ಪಿ ವೆಂಕಟಪ್ಪ ರಸ್ತೆ) ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.97.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯು ದೊರಕಿದ್ದು, ರೂ.93.20 ಲಕ್ಷಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಶ್ರೀ.ಡಿ.ವೆಂಕಟೇಶ್ ಮತ್ತು ಶ್ರೀ.ಮುನಿರತ್ನ ಅರ್ಹರಾಗಿದ್ದು, ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ, ವಿವರಗಳು ಕೆಳಕಂಡಂತಿದೆ.

1. ಶ್ರೀ.ಡಿ.ವೆಂಕಟೇಶ್ ರವರು ಒಟ್ಟು ರೂ.1,58,68,205.00 ನಮೂದಿಸಿದ್ದು, ಇದನ್ನು 07-08ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.60.60% ರಷ್ಟು ಹೆಚ್ಚಾಗಿದ್ದು, ಹಾಗೂ 07-08ನೇ ಸಾಲಿನ ದರಪಟ್ಟಿ ಹಾಗು ಹೆಚ್ಚುವರಿ ಸಿಮೆಂಟ್/ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.56.17% ರಷ್ಟು ಹೆಚ್ಚಾಗಿರುತ್ತದೆ.

2. ಶ್ರೀ.ಮುನಿರತ್ನ ರವರು ಒಟ್ಟು ರೂ.1,70,23,805 ನಮೂದಿಸಿದ್ದು, ಇದನ್ನು 07-08ನೇ ಸಾಲಿನ ದರಪಟ್ಟಿಗೆ ಹೋಲಿಸಿದಾಗ ಶೇ.82.05% ರಷ್ಟು ಹೆಚ್ಚಾಗಿದ್ದು ಹಾಗೂ 07-08ನೇ ಸಾಲಿನ ದರಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್/ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.67.55% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಡಿ.ವೆಂಕಟೇಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು 2007-08ನೇ ಸಾಲಿನ ದರಪಟ್ಟಿ ಹಾಗೂ ಸಿಮೆಂಟ್/ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.56.17% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ:31/03/2008 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸಂಧಾನದ ನಂತರ ಗುತ್ತಿಗೆದಾರರು ಶೇ.14.95% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಕನಿಷ್ಠ ಗುತ್ತಿಗೆದಾರರಾದ ಶ್ರೀ.ಡಿ.ವೆಂಕಟೇಶ್ ರವರ ಗುತ್ತಿಗೆಯ ಮೊತ್ತ ರೂ.1,16,79,680.00 ಗಳಾಗಿದ್ದು, ಇದನ್ನು 07-08ರ ಸಾಲಿನ ದರಸೂಚಿ ಮೊತ್ತ ಹಾಗೂ ಹೆಚ್ಚುವರಿ ಸಿಮೆಂಟ್/ಬಿಟುಮಿನ್ ದರಗಳ ಮೊತ್ತ ರೂ.1,01,60,661.00 ಗಳಿಗೆ ಹೋಲಿಸಿದಾಗ ಶೇ.14.95% ರಷ್ಟು ಹೆಚ್ಚಿದ್ದು, ಸದರಿ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04/08/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:04/08/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು